ಶುಭವಾಗಲಿದೆ. ನಿನ್ನ ಕೈಯಲ್ಲಿಯ ಭರಣಿಯಲ್ಲೇನಿದೆ? ಸುಗಂಧ ಹೊರಹೊಮ್ಮುತ್ತಿದೆ. ಚಂದನವೇ ಇರಬೇಕು. ನನಗಷ್ಟು ತರಲಾರೆಯಾ?' ಕಣ್ಣಲ್ಲಿ ತುಂಟತನ ಮಿಂಚಿತು.

ಆಕೆ ನಡುಗುವ ಕೈಗಳಿಂದ ಭರಣಿಯ ಮುಚ್ಚಳ ತೆಗೆದು ಮುಂದೆ ಹಿಡಿದಳು. 'ನೀನೇ ನಿನ್ನ ಕೈಗಳಿಂದ ಹಚ್ಚು' ಅವಳ ಮುಂದೆ ಮುಖವೊಡ್ಡಿ ನಿಂತ.

ಅವಳ ಗಂಟಲಿನಲ್ಲೇನೋ ಅಡಗಿ ಕುಳಿತಂತಾಗಿ ಮಾತು ಮೂಕವಾಯಿತು. ಭಾವನೆಗಳೆಲ್ಲ ಅಶ್ರುರೂಪದಲ್ಲಿ ತುಂಬಿ ಹರಿಯಿತು. ಜೀವನದಲ್ಲಿ ಪ್ರಪ್ರಥಮವಾಗಿ ಇಂತಹ ಆದರದ ಮಾತುಗಳನ್ನು ಕೇಳಿದಳು. ಹೆಚ್ಚಿನ ರಾಜಕುಟುಂಬಗಳು ಇವಳನ್ನು ಅಸ್ಪೃಶ್ಯಳಂತೆ ಕಂಡು ಅವಳ ಕುರೂಪವನ್ನು ನೋಡಲಿಚ್ಛಿಸದೆ ಒಂದು ಹಾಕಿಹೋಗಲು ಪ್ರತ್ಯೇಕವಾಗಿ ಭರಣಿಯೊಂದನ್ನು ಬಾಗಿಲ ಹೊರಗೇ ಸ್ಥಾಪಿಸಿ ಬಿಟ್ಟಿದ್ದರು. ಈಗ ಈ ಮಹಾಪುರುಷ ಚಂದನವನ್ನು ನೀನೇ ಕೈಯಾರ ಹಚ್ಚು ಎಂದು ತಲೆಬಾಗಿ ಕಾದು ನಿಂತಿದ್ದಾನೆ. ಕಂಪಿಸುತ್ತಿದ್ದ ಕೈಗಳಿಂದ ಅವನ ಕದಪುಗಳಿಗೆ ನವಿರಾಗಿ ಹಚ್ಚಿ ಹಣೆಗೆ ಚಂದನದ ಬೊಟ್ಟಿಟ್ಟಳು.

ಅವನನ್ನು ಹೊತ್ತ ರಥ ಮುಂದೆ ಸಾಗಿದ ನಂತರವೂ ಎಷ್ಟೋ ಹೊತ್ತು ಅದೆಬ್ಬಿಸಿದ ಧೂಳನ್ನೇ ಆಘ್ರಾಣಿಸುತ್ತಾ ಮೈಮರೆತು ನಿಂತುಬಿಟ್ಟಿದ್ದಳು.

***

ಹೊತ್ತು ನಡುರಾತ್ರಿ ಮೀರಿತ್ತು. ಅಕ್ರೂರನ ಭವನದಲ್ಲೆಲ್ಲರೂ ನಿದ್ರೆಗೆ ಜಾರಿದ್ದರೆ ಯಶೋದಾನಂದನ ಮಾತ್ರ ನಿದ್ರೆ ಬರದೆ ಹೊರಳಾಡುತ್ತಿದ್ದ. ಮೆಲ್ಲನೆದ್ದು ಒಂದು ಉಪವನದ ಪಾವಟಿಗೆಗಳ ಮೇಲೆ ಅದೆಷ್ಟು ಹೊತ್ತು ಕುಳಿತಿದ್ದನೋ. ಅಕ್ರೂರ ಬಂದು ಪಕ್ಕ ಕುಳಿತದ್ದೂ ಅವನ ಅರಿವಿಗೆ ಬಂದಂತಿರಲಿಲ್ಲ.

'ಏನಪ್ಪಾ ದೊರೆ, ನಿದ್ರೆ ಬರಲಿಲ್ಲವೇ? ಏನೋ ಗಾಢವಾದ ಚಿಂತೆಯಲ್ಲಿರುವಂತಿದೆ? ನಾಳೆ ಕಂಸ ಏನು ಮಾಡಿ ಬಿಡುವನೋ ಎಂಬ ಭಯವೇ?'

ಕೃಷ್ಣ ನಕ್ಕ.

'ಭಯ? ನನಗೆ ಭಯವೆಂದರೇನೆಂದೇ ತಿಳಿಯದು ತಾತ. ನನಗೆ ನಾಳೆಯ ಬಗ್ಗೆಯೂ ಚಿಂತೆ ಇಲ್ಲ.'

'ಮತ್ತೇಕೆ ವಿಶ್ರಾಂತಿ ತೆಗೆದುಕೊಳ್ಳದೆ ಚಿಂತೆ ಮಾಡುತ್ತಾ ಇಲ್ಲಿ ಕುಳಿತಿದ್ದೀಯೆ?'

'ಅದೇ ಅಜ್ಜ. ಇಂದು ನನಗೆ ಚಂದನ ಲೇಪಿಸಿದಳಲ್ಲಾ. ಏನವಳ ಹೆಸರು?'

'ಎಲ್ಲರೂ ಕರೆಯುವುದು ತ್ರಿವಕ್ರ ಎಂದು. ಎಲ್ಲ ಮಕ್ಕಳಂತೆ ಅವಳ ಹೆತ್ತವರೂ ಅವಳಿಗೆ ಸುಂದರವಾದ ಹೆಸರನ್ನೇ ಇಟ್ಟಿದ್ದರಂತೆ. ಈಗದರ ನೆನಪು ಯಾರಿಗೂ ಇಲ್ಲ ಅವಳಿಗೂ ಸಹ.'

'ಹಾಗಿದ್ದರೆ ನಾನವಳನ್ನು 'ಸುಂದರಿ' ಎನ್ನಬಹುದೆ?' ಅಕ್ರೂರ ನಕ್ಕ.

'ಚೆನ್ನಾಗಿದೆ ನಿನ್ನ ಈ ವಿರೋಧಾಭಾಸ! ಆ ಕುರೂಪಿಯನ್ನು ಸುಂದರಿ ಎನ್ನುವುದೇ?'

'ಯಾರೇನೇ ಹೇಳಲಿ ನನಗಂತೂ ಅವಳು ಸುಂದರಿಯೇ. ನಾನವಳನ್ನು ಕರೆಯುವುದೇ ಹಾಗೆ. ಅವಳು ವಕ್ರವಾಗಿಯೇ ಹುಟ್ಟಿದ್ದೇ?'

'ಹಾಗೇನಿಲ್ಲ ಕೃಷ್ಣ. ಅವಳು ಜನ್ಮ ತಳೆದಾಗ ಎಲ್ಲ ಶಿಶುಗಳಂತೆ ಅಂದವಾಗಿಯೇ ಇದ್ದಳು. ಅವಳ ಕುಟುಂಬದವರು ಸಾಕಷ್ಟು ಸ್ಥಿತಿವಂತರೇ. ಒಂದು ತುಂಡು ಭೂಮಿಯಲ್ಲಿ ಶ್ರೀಗಂಧದ ಜೊತೆ ಸುಗಂಧ ಪುಷ್ಪಗಳನ್ನು ಬೆಳೆಸಿ ಅವುಗಳ ರಸ ಭಟ್ಟಿ ಇಳಿಸಿ ರಾಜಮನೆತನದವರಿಗೆ, ಇತರೇ ಶ್ರೀಮಂತ ವಿಲಾಸಿಗಳಿಗೆ ವಿತರಿಸುವುದೇ ಅವರ ವೃತ್ತಿ. ನಿನ್ನ ಈ ಸುಂದರಿಗೆ ಆರೋ ಏಳೋ ವಯಸ್ಸಾದಾಗ ನಲವತ್ತೆಂಟು ದಿನಗಳು ಕಾಡಿದ ಜ್ವರ ಯಾವುದೇ ವೈದ್ಯೋಪಚಾರಕ್ಕೆ ಮಣಿಯದೆ ಅವಳನ್ನೀಸ್ಥಿತಿಗೆ ತಂದಿತು. ನೀಳದೇಹ ವಕ್ರವಾಯಿತು. ಬಾಯಿ ಮುಂದೆ ಚಾಚಿತು, ಕಣ್ಣುಗಳೆರಡೂ ಉಬ್ಬಿ ಹೊರಹೊಮ್ಮಿತು. ಒಂದು ಮುಂಜಾನೆ ಮನೆ ಬಿಟ್ಟವನೊಬ್ಬನಿಗೆ ಮೊಟ್ಟಮೊದಲು ಇವಳ ದರ್ಶನವಾಯಿತಂತೆ. ಅವನ ಹಣೆಯ ಬರಹ ಅಂದೇ ಕುದುರೆಯ ಮೇಲಿಂದ ಬಿದ್ದು ಬೆನ್ನು ಮುರಿದು ಹಾಸಿಗೆ ಹಿಡಿದ. ಇದರ ಪರಿಣಾಮ ಅಮಾಯಕಳ ಮೇಲಾಯಿತು. ಇವಳ ಮುಖದರ್ಶನವೇ ಅಪಶಕುನದ ಕುರುಹಾಯಿತು. ಹೊರಗಿನವರಿರಲಿ ಇವಳ ಒಡಹುಟ್ಟಿದವರೇ ಮೌಢ್ಯಕ್ಕೆ ಸಹಮತ ನೀಡಿದರು. ಹೆತ್ತವರ ವಿಯೋಗದ ಬಳಿಕ ಇವಳ ಸ್ಥಿತಿ ಇನ್ನೂ ಚಿಂತಾಜನಕವಾಯಿತು. ನಸುಕಿನಲ್ಲಿ ಮನೆ ಬಿಟ್ಟರೆ ಬೀದಿ ಬೀದಿ ಅಲೆದು ಸುಗಂಧ ದ್ರವ್ಯ ವಿತರಿಸಿ ದಣಿದು ರಾತ್ರಿ ಮನೆ ಸೇರಿದರೆ ಅಣ್ಣ ಅತ್ತಿಗೆಯರಿಂದ ಅವಹೇಳನ, ಅನಾದರ. ಇಂತಹ ಪ್ರೀತ್ಯಾದರವಿಲ್ಲದ ಜೀವನ ಎದುರಿಸಲು ಅವಳಿಗಿದ್ದ ಒಂದೇ ಅಸ್ತ್ರ ವಿನೋದ ಮನೋಭಾವ. ಅವಳ ರೂಪಿನ ಬಗ್ಗೆ ಯಾರಾದರೂ ಆಡಿಕೊಂಡರೆ ಅವರಿಗಿಂತ ಅವಳೇ ಹೆಚ್ಚಾಗಿ ನಗುವಳು. ಇವಳ ವಕ್ರನಡಿಗೆಯನ್ನು ಯಾರಾದರೂ ಅನುಕರಿಸಿದರೆ ಮತ್ತೂ ವಕ್ರವಾಗಿ ನಡೆದು ಅವರ ನಗೆಯೊಂದಿಗೆ ಬೆರೆಯುವಳು. ತನ್ನೆಲ್ಲಾ ದುಃಖ ದುಮ್ಮಾನಗಳನ್ನು ಹೃದಯದಲ್ಲಿ ಹುಗಿದು ಮೇಲೆ ಬೃಂದಾವನ ಕಟ್ಟಿ ಹಾಸ್ಯಲೇಪನ ಮಾಡಿ ಬದುಕುತ್ತಿದ್ದಾಳೆ ಕೃಷ್ಣ. ಆ ನಗುವಿನ ಹಿಂದೆ ದುಃಖದ ಕಡಲೇ ಭೋರ್ಗರೆಯುತ್ತಿದೆ. ಈಗ ನಿನಗದರ ಚಿಂತೆ ಬೇಡ. ನಾಳೆಯ ಯಜ್ಞದ ಬಗ್ಗೆ ಯೋಚಿಸು. ಕಂಸನ ಕಾರ್ಯತಂತ್ರವನ್ನು ಎದುರಿಸುವ ಬಗ್ಗೆ ಚಿಂತಿಸು.'

'ಅಜ್ಜಾ, ಈವರೆಗೂ ಯಾರಿಗೂ ಹೇಳದಿದ್ದ ನನ್ನ ಅಂತರಂಗದ ಒಂದು ವಿಷಯವನ್ನು ಈಗ ನಿನಗೆ ಹೇಳಬೇಕೆನಿಸುತ್ತಿದೆ. ಎಲ್ಲಿ ಅನ್ಯಾಯ ಅಧರ್ಮ ಕಂಡರೂ ಅದು ನನ್ನನ್ನು ಅತೀವ ಕಾಡುತ್ತದೆ. ಅದಕ್ಕೆ ಪರಿಹಾರ ನೀಡುವ ತುಡಿತ ತೀವ್ರವಾಗುತ್ತದೆ. ಈಚೀಚೆಗೆ ನನ್ನ ಜೀವನದ ಧ್ಯೇಯ ಇದೇ ಎಂಬ ಭಾವನೆ ಬಲವಾಗುತ್ತಿದೆ.'

ಅಕ್ರೂರ ಅವನನ್ನು ಪ್ರೀತಿಯಿಂದ ಆಲಂಗಿಸಿದ. 'ಮಗೂ, ನಿನ್ನ ಈ ತುಡಿತಕ್ಕೆ ತಕ್ಕ ವೇದಿಕೆ ಸಿದ್ಧವಾಗುತ್ತಿದೆಯಪ್ಪ. ಅಂದು ತ್ರಿಕಾಲ ಜ್ಞಾನಿಗಳು ಕಂಸನಿಗೆ ನುಡಿದ ಭವಿಷ್ಯವಾಣಿ ಸತ್ಯವಾಗುವ ಕಾಲ ಬಂದಿದೆ. ಇಷ್ಟು ಸಂವತ್ಸರಗಳಿಂದ ಈ ಕ್ಷಣಕ್ಕಾಗಿ ಕಾಯುತ್ತಿದ್ದೆವು ಕೃಷ್ಣಾ. ಇದಕ್ಕಾಗಿಯೇ ಭಗವಂತ ನಿನ್ನನ್ನಿಲ್ಲಿಗೆ ಕರೆತಂದಿದ್ದಾನೆ. ಈಗ ಹೆಚ್ಚೇನೂ ಕೇಳಬೇಡ. ನಾಳೆಯ ದಿನ ನಿನ್ನ ಜೀವನದ ಮಹಾದಿನ. ನಿನ್ನೆಲ್ಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುತ್ತೀಯ. ಈಗ ಮಲಗಿ ವಿಶ್ರಮಿಸು' ಶಯನ ಗೃಹಕ್ಕೆ ಕೈಹಿಡಿದು ಕರೆತಂದ.

***

ಒಂದೇ ದಿನದಲ್ಲಿ ಯಾದವರ ಪರಿಸ್ಥಿತಿ ಬದಲಾಗಿಬಿಟ್ಟಿತು. ದುಷ್ಟ ಕಂಸನ ಸರ್ವಾಧಿಕಾರ, ದಬ್ಬಾಳಿಕೆ, ಕ್ರೌರ್ಯದಿಂದ ನರಳುತ್ತಿದ್ದ ಜನರ ಕಷ್ಟಗಳೆಲ್ಲಾ ಅವನ ವಧೆಯಿಂದ ಕೊನೆಗೊಂಡವು. ಅವನನ್ನು ವಧಿಸಿದ ಕೃಷ್ಣ ಯಾದವ ಕುಲಕ್ಕೆ ದೈವದಂತೆ ಕಂಡ. ಗೂಳಿಗಳಂತೆ ಕೊಬ್ಬಿ ಮೆರೆಯುತ್ತಿದ್ದ ಅವನ ಅನುಯಾಯಿಗಳು ರೊಚ್ಚಿಗೆದ್ದ ಜನರ ರೋಷಕ್ಕೆ ಬೆದರಿ ಪಲಾಯನಗೊಂಡರೆ ಸಾಮಾನ್ಯ ಜನತೆ ಕುಣಿದು ಆನಂದದಿಂದ ಓಲಾಡಿದರು. ಮೊದಲ ಬಾರಿಗೆ ಕೃಷ್ಣ ತಾನು ವಸುದೇವ ದೇವಕಿಯರ ಪುತ್ರನೆಂಬ ಸತ್ಯ ಅರಿತುಕೊಂಡ. ಅಂದಿನವರೆಗೂ ಗೋಪಾಲಕೃಷ್ಣನಾಗಿದ್ದವ ಈಗ ವಾಸುದೇವ ಕೃಷ್ಣನಾಗಿ ಯಾದವರ ಕಣ್ಮಣಿಯಾದ. ಕೃತಜ್ಞತೆಯ ಕುರುಹಾಗಿ ಯಾದವರು ಅವನಿಗೆ ಕಂಸನ ಸಿಂಹಾಸನವನ್ನೇ ನೀಡಿದರು. ಅದನ್ನಾತ ನಯವಾಗಿಯೇ ತಿರಸ್ಕರಿಸಿದ. ಅಧರ್ಮ ಅನ್ಯಾಯಗಳನ್ನು ತಡೆದು ಧರ್ಮಪರಿಪಾಲನೆ ಮಾಡುವ ದೀಕ್ಷೆ ತನ್ನದು. ಅಧಿಕಾರದ ಇಕ್ಕಟ್ಟಿನಲ್ಲಿ ಸಿಲುಕಿದಾಗ ಧರ್ಮಾಧರ್ಮಗಳ ನಡುವಿನ ಸೂಕ್ಷ್ಮತೆ ಮಸುಕಾಗಬಹುದು. ತನಗೆ ಅಧಿಕಾರ ಬೇಡವೆಂದವ ಕಂಸನಿಂದ ಸೆರೆಮನೆಯಲ್ಲಿ ಬಂಧಿಯಾಗಿದ್ದ ಉಗ್ರಸೇನ ಮಹಾರಾಜನಿಗೆ ಸ್ವತಃ ರಾಜ್ಯಾಭಿಷೇಕ ಮಾಡಿ ತಾನು ಈವರೆಗೂ ಪಡೆಯದ ಶಾಸ್ತ್ರಾಭ್ಯಾಸಕ್ಕಾಗಿ ಅಣ್ಣ ಬಲರಾಮನೊಡನೆ ಗುರು ಸಾಂದೀಪನಿಗಳ ಆಶ್ರಮಕ್ಕೆ ಹೊರಟುನಿಂತ.

## ಕಾರ್ಯಕ್ರಮ

ಶುದ್ಧ ಗಾಳಿಗಾಗಿ
ವನಮಹೋತ್ಸವಕ್ಕೆ
ಗಿಡಗಳನ್ನು ನೆಟ್ಟರು
ಕಾರ್ಯಕ್ರಮದ ನಂತರ
ಸಮಾರಂಭದಲ್ಲಿ
ಸಿಗರೇಟುಗಳ ಸುಟ್ಟರು..!



★ ಪತ್ತಂಗಿ ಎಸ್. ಮುರಳಿ

ಈಶ್ವರ

